

ಜೇನುಕಂಠದ ಗಾಯಕಿ ಆಶಾ ಭೋಸ್ಲೆ ಸಾವಿರಾರು ಹಾಡುಗಳಿಗೆ ದನಿಯಾಗಿ, ಕೇಳುಗರ ಕಣ್ಮಣಿಯಾಗಿ, ಹೃದಯ ತಟ್ಟುವಂಥ ಗಾನದ ಹೊನಲನ್ನು ಹರಿಸಿ ಬಾರದ ಲೋಕಕ್ಕೆ ನಿರ್ಗಮಿಸಿದ್ದಾರೆ. ನಮ್ಮ ಭಾವಲೋಕಕ್ಕೆ ಹರೆಯವನ್ನುಳಿಸಿ, ಹಾಡುಗಳ ಕಾಲ್ಗಳಿಗೆ ಗಾಜಿನ ಮಣಿಗಳ ಗೆಜ್ಜೆ ಕಟ್ಟಿದ ಈ ಗಂಧರ್ವ ಸಂಗೀತದ ನಕ್ಷತ್ರವಾದರು. ಅವರೊಂದು ನಿರಂತರ ಎಚ್ಚರ, ಸೋಲದ ಛಲದ ಪಾಠ. ತನ್ನ ದನಿಯ ಮೂಲಕ ಸಂಗೀತ ಲೋಕದಲ್ಲಿ ಜಾದೂ ಮೂಡಿಸಿದ್ದ ಆಶಾ ಗಾನಬದುಕಿನ ಒಳಹೊರಗನ್ನು ಸಮಗ್ರವಾಗಿ ಕಟ್ಟಿಕೊಡುವ ಈ ಬರಹ, ಆಶಾ ತಾಯಿಗೆ 'ಸುಧಾ' ನೀಡುವ ಗೌರವಪೂರ್ವಕ ನುಡಿನಮನವೂ ಹೌದು.

# ಅಭಿ ನಾ ಜಾವೊ ಛೋಡಕರ್...

■ ಎನ್. ಸಂಧ್ಯಾರಾಣಿ

ಗೆಜ್ಜೆಗೊಂಚಲಿಗೆ ಒಂದು ಅವರ್ಣನೀಯವಾದ ಲಯ, ಗತಿ, ಮಾರ್ದವತೆ ಇರುತ್ತದೆ. ಆದರೆ ಅದನ್ನು ಒಂದು ಗಾಜಿನ ಬಟ್ಟಲಿನಲ್ಲಿಟ್ಟು ಕುಲುಕಿದರೆ ಅದಕ್ಕೆ ಒಂದು ಅನೂಹ್ಯವಾದ 'ಖನಕ್' ಸಹ ಸೇರಿಕೊಳ್ಳುತ್ತದೆ. ಹೀಗೆ ಯಾರೋ ಒಬ್ಬ ಸಂಗೀತ ನಿರ್ದೇಶಕರು ಆಶಾ ದನಿಯನ್ನು ಬಣ್ಣಿಸಿದ್ದ ನೆನಪು. ಆಶಾ ಭೋಸ್ಲೆ – ಶಾಸ್ತ್ರೀಯ, ಭಜನ್, ಗಜಲ್, ಪಾಪ್, ಚಿತ್ರಸಂಗೀತ, ಲಾವಣಿ, ಕವ್ವಾಲಿ, ಜನಪದ ಎಲ್ಲಾ ಪ್ರಕಾರಗಳಲ್ಲಿ 20 ಭಾಷೆಗಳ ಸುಮಾರು 12000 ಹಾಡುಗಳಲ್ಲಿ ಅನುರಣಿಸಿದ ಸಿರಿದನಿ.

1932ರಲ್ಲಿ ಮಂಗೇಷ್ಕರ್ ಪರಿವಾರದಲ್ಲಿ ಮೂರನೆಯ ಮಗಳಾಗಿ ಜನಿಸಿದ ಆಶಾ ಬಣ್ಣದಲ್ಲಿ ಸಾದುಗಪ್ಪು, ಮನೆಯವರು 'ಪೈಲ್ವಾನ್', 'ಪಠಾಣ್' ಎಂದು ರೇಗಿಸುತ್ತಿದ್ದ ಗುಂಡುಗುಂಡು ಮಗು. ಅಪ್ಪ ಆಕೆಯನ್ನು ಕರೆಯುತ್ತಿದ್ದದ್ದು 'ದಡ್ಡಿ' ಎಂದು. ಅದನ್ನು ಆಕೆಯೇ ಒಂದು ಸಂದರ್ಶನದಲ್ಲಿ ನಗುತ್ತಲೇ ಹೇಳಿದ್ದರು. ಇನ್ನೊಂದೆಡೆ ಅಕ್ಕ ಲತಾ ಮಂಗೇಷ್ಕರ್. ಹಟ ಮಾಡಿ ಬಿಳಿ ಫ್ರಾಕ್ ತೊಟ್ಟು, ಅಪ್ಪನೊಡನೆ ವೇದಿಕೆಯಲ್ಲಿ ಹಾಡಿ, ಎಲ್ಲರಿಂದಲೂ ಶಭಾಷ್ ಎನ್ನಿಸಿಕೊಂಡಿದ್ದ ನಾಜೂಕು ಮಗು. ಲತಾಗೆ ತಂಗಿಯ ಮೇಲೆ ಅದೆಷ್ಟು ಪ್ರೀತಿ ಎಂದರೆ ಎಲ್ಲಿ ಹೋದರೂ, ಏದುಸಿರು ಬಿಡುತ್ತಲೇ ಗುಂಡಮ್ಮ ತಂಗಿಯನ್ನು ಎತ್ತಿಕೊಂಡೇ ಓಡಾಡುತ್ತಿದ್ದರಂತೆ. ಶಾಲೆಗೂ ಸಹ ಕರೆದುಕೊಂಡು ಹೋಗುತ್ತಿದ್ದರಂತೆ. ಶಾಲೆಯಲ್ಲಿ ಟೀಚರ್ ಫೀಸ್ ಕಟ್ಟದ ಒಂದು ಮಗುವಿಗೆ, ಹಾಗೆಲ್ಲಾ ಇಬ್ಬಿಬ್ಬರು ಬರಬಾರದು ಎಂದಾಗ, ತಂಗಿಯನ್ನು ಬಿಡದೆ, ಶಾಲೆಯನ್ನು ಬಿಟ್ಟವರು ಲತಾ! ಆದರೆ ಅಕ್ಕ ತಂಗಿಯರ ಸಂಬಂಧ ಹಲವು ಸಂಕೀರ್ಣತೆಗಳನ್ನು ಒಳಗೊಂಡಿರುತ್ತದೆ. ಸಿಟ್ಟಾದೆ ಎಂದು ಕತ್ತರಿಸಿ ಎಸೆಯಲಾಗದ, ಆದರೆ ಒಂದು ನಿರಂತರ ಅದಮ್ಯ ಸ್ಪರ್ಧೆ ಇರುವ ಸಂಬಂಧ ಅದು.